(ಇಂದು ದಿನಾಂಕ: 08-06-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

<u>ಮುಂದುವರೆದ ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರ ಪರವಾಗಿ:-</u>

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಡಿ.1 ರಿಂದ 3 | ಒಟ್ಟು 3 ಪಹಣಿ ಪತ್ರಿಕೆಗಳ ಧೃಢಿಕೃತ ನಕಲುಗಳು |
| ನಿ.ಡಿ. 4 | ಒಂದು ಮ್ಯುಟೆಷನ್ ಧೃಡಿಕೃತ ನಕಲು |

<u>ಪಾಟೀಸವಾಲು: ವಾದಿಯರ ಪರ ವಕೀಲರಿಂದ:</u>

1. ದೇವಮ್ಮ ನನ್ನ ತಂಗಿ. ದಾವಾ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೇ ನಂಬರ ಹೇಳಲು ಬರುವುದಿಲ್ಲ. ಸರ್ವೇ ನಂ. 104 ಇನಾಮ ಆಸ್ತಿ. ದಾವಾ ಆಸ್ತಿ ಐಟಮ್ ನಂ.2 ಮತ್ತು 3 ಹಾಗೂ ದಾವಾ ಮನೆ ಕೂಡಾ ಹಿರಿಯರ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ಐಟಮ್ ನಂ.1 ಗೆ ಸಂಬಂಧಪಟ್ಟಂತೆ ಭೂ ನ್ಯಾಯಮಂಡಳಿ ಸಿಂಧನೂರು ರವರು ಆದೇಶ ನಿಪಿ-34 ಮಾಡಿರುತ್ತಾರೆ ಎಂದರೆ ಸರಿ. ಭೂ ನ್ಯಾಯಮಂಡಳಿ ಸಿಂಧನೂರು ರವರು ಆದೇಶ ನಿಪಿ-34 ನೇದ್ದರಲ್ಲಿ ದೊಡ್ಡಬಸಪ್ಪರವರ ಹೆಸರು ನಮೂದು ಇದೆ ಎಂದರೆ ಸರಿ. ಈ ಮೊದಲು ನನ್ನ ತಂದೆಯವರು ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. ಆದಕಾರಣ ದಾವಾ ಆಸ್ತಿ ಐಟಮ್ ನಂ.1 ನೇದ್ದನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ ಎಂದರೆ ಸರಿ.

2. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿದ್ದರಿಂದ ಅದರಲ್ಲಿ ಎಲ್ಲರಿಗೂ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿದ್ದರಿಂದ ಅದರಲ್ಲಿ ಎಲ್ಲರಿಗೂ ಸಮಾನವಾದ ಹಕ್ಕು ಇದೆ ಅಂತಾ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ವಾದಿಯರ ಪರ ಶ್ರೀ ಯು ಕೆ ವಾಯ್  ವಕೀಲರಿಂದ:**

3. ದೊಡ್ಡಬಸಪ್ಪನ ತಂದೆ ಹೆಸರು ಈಶ್ವರಪ್ಪ. ನನ್ನ ತಾತ ಈಶ್ವರಪ್ಪ ರವರು ಆಂಜನೇಯಸ್ವಾಮಿ ದೇವಸ್ಥಾನ ಅರ್ಚಕರಾಗಿದ್ದರು. ನಂತರ ನನ್ನ ತಂದೆ ಕೂಡಾ ಆಂಜನೇಯ ಸ್ವಾಮಿ ದೇವಸ್ಥಾನದ ಅರ್ಚಕರಾಗಿದ್ದರು. ನಮ್ಮ ಮನೆತನದವರು ನನ್ನ ತಾತ ಈಶ್ವರಪ್ಪನ ಕಾಲದಿಂದಲೂ ಆಂಜನೇಯಸ್ವಾಮಿ ದೇವಸ್ಥಾನ ಅರ್ಚಕರಾಗಿದ್ದ ಕಾರಣ ನಮಗೆ ಸರ್ಕಾರದವರು ಗೋನಾಳ ಗ್ರಾಮ ಸರ್ವೇ ನಂ.104 ನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ವಾದಿ ಪ್ರತಿವಾದಿಯರಿಗೆ ಎಲ್ಲರಿಗೂ ಆಸ್ತಿಯಲ್ಲಿ ಸಮಪಾಲು ಇರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು